ಸೂಚನೆಯೇ ಪ್ರಶಸ್ತಿಗಳು. ಬರಹಗಾರ ತನ್ನ ಬರಹಗಳ ಮೂಲಕ ಸಮಾಜಕ್ಕೆ ಒಳಿತನ್ನು ಮಾಡುತ್ತಾನೆ. ಅಂತಹ ಬರಹಗಾರರನ್ನು ಗೌರವಿಸುವುದು ಸಮಾಜದ ಹೊಣೆಗಾರಿಕೆಯೂ ಆಗಿರುತ್ತದೆ.

◆ **ಸಾಮಾನ್ಯವಾಗಿ ಲೇಖಕಿಯರು ಆತ್ಮಕತೆ ಬರೆಯಲು ಹಿಂದೇಟು ಹಾಕುತ್ತಾರೆ. ಅದರ ಹಿಂದಿನ ರಾಜಕೀಯ ಏನಿರಬಹುದು?**

ಹೆಚ್ಚಿನ ಸಂಖ್ಯೆಯ ಲೇಖಕಿಯರು ಅದರಲ್ಲೂ ಮಹಿಳೆಯರ ಕುರಿತೇ ಬರೆಯುವ ಲೇಖಕಿಯರು ತಮ್ಮ ಸ್ವಂತ ಅನುಭವಗಳನ್ನೇ ಕತೆಗಳನ್ನಾಗಿ ಬರೆಯುತ್ತಿರುತ್ತಾರೆ. ತನ್ನದೇ ಅನುಭವವನ್ನು ಯಾರಿಗಾದರೂ ಹೇಳಿಕೊಳ್ಳುವ ತುಡಿತ ಹೆಣ್ಣಿಗೆ ಸಹಜವಾಗಿ ಇದ್ದೇ ಇರುತ್ತದೆ. ಆದರೆ ಯಾರಲ್ಲಿ ಹೇಳಿಕೊಳ್ಳಬೇಕೆಂಬ ಭಯ. ಹಾಗೆಂದೇ ಲೇಖಕಿಯರು ಕಲ್ಪನೆ ಬೆರೆಸಿ ತಮ್ಮ ಅನುಭವಗಳನ್ನೇ ಕತೆಯಾಗಿ ಬರೆಯುತ್ತಾರೆ. ಮುಂದೆ ಆತ್ಮಕತೆ ಬರೆಯಬೇಕೆಂದು ಯಾರಾದರೂ ಪ್ರೇರೇಪಿಸಿದರೂ ಅವೇ ವಿವರಗಳು ಪುನರಾವರ್ತನೆ ಆಗುವುದರಿಂದ ಆತ್ಮಕತೆ ಬರೆಯಲು ಸಹಜವಾಗಿ ಹಿಂದೇಟು ಹಾಕುತ್ತಾರೆ. ಇನ್ನು ನನ್ನ ವಿಷಯಕ್ಕೆ ಬಂದರೆ, ನನ್ನ ಕತೆ ಕಾದಂಬರಿಗಳಾವುವೂ ನನ್ನ ಆತ್ಮಕತೆಗಳಲ್ಲ (ನಗು). ನಾನು ಕಂಡ, ಕೇಳಿದ, ನನ್ನ ಸುತ್ತಲಿನ ಮಹಿಳೆಯರ ಕತೆಗಳು. ಹೀಗಾಗಿ ನಾನು ನನ್ನ ಆತ್ಮಕತೆ ಬರೆಯಬೇಕಿದೆ, ಬರೆಯುತ್ತಿದ್ದೇನೆ.

◆ **ನೀವು ಎಷ್ಟು ಸಾಹಿತ್ಯ ಜೀವಿಯೋ ಅಷ್ಟೇ ರಾಜಕೀಯ ಜೀವಿಯೂ ಹೌದು. ಒಳ್ಳೆಯ ಮನಸ್ಸಿನವರು ರಾಜಕೀಯಕ್ಕೆ ಬಂದರೆ ಸಮಾಜಕ್ಕೆ ಒಳಿತು ಎಂಬ ಸದಾಶಯದಿಂದ ಕೇಳುತ್ತಿರುವೆ.**

ಚುನಾವಣಾ ರಾಜಕೀಯಕ್ಕೆ ಇಳಿಯಬೇಕೆಂದು ನಾನೆಂದೂ ಅಂದುಕೊಂಡಿಲ್ಲ. ಜನರಿಗೆ ಹತ್ತಿರದಲ್ಲಿದ್ದು ಅವರ ಸಮಸ್ಯೆಗಳ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಿ, ಅವರನ್ನು ಸಾಂಘಿಕವಾಗಿ ಬೆಳೆಸಿ, ಅವರಿಗೆ ತಮ್ಮದೇ ಆದ ದನಿ ನೀಡುವುದೇ ರಾಜಕೀಯ ಎಂದು ನಾನು ನಂಬುತ್ತೇನೆ. ಇದು ಪ್ರಜಾ ರಾಜಕೀಯ. ಇಂಥ ರಾಜಕೀಯದಲ್ಲಿ ನಾನಿರುತ್ತೇನೆಯೇ ವಿನಃ ಚುನಾವಣಾ ರಾಜಕೀಯದಲ್ಲಲ್ಲ. ನನ್ನಂತೆಯೇ ಇಂಥ ರಾಜಕೀಯದಲ್ಲಿ ಪ್ರವೇಶಿಸಲು ಅನೇಕರು ಇಷ್ಟಪಡುವುದಿಲ್ಲ. ನಮ್ಮದೇ ಆದ ಹೊಸ ಪಕ್ಷ ಕಟ್ಟಿಕೊಂಡು ಪ್ರವೇಶಿಸಬಹುದೇನೋ. ಆದರೆ ಅದಕ್ಕೆ ಸಾಕಷ್ಟು ಹಣಬಲ, ಬೆಂಬಲಗಳು ಬೇಕು. ಅದು ಅಷ್ಟು ಸುಲಭದ ಕೆಲಸವಲ್ಲ.

◆ **ಭಾರತದ ಇಂದಿನ ರಾಜಕೀಯ ಸಂದರ್ಭದಲ್ಲಿ ಪ್ರಜಾಪ್ರಭುತ್ವಕ್ಕೆ ಭವಿಷ್ಯವಿದೆ ಅನಿಸುತ್ತದೆಯೇ?**

ಪ್ರಜಾಪ್ರಭುತ್ವಕ್ಕೆ ಖಂಡಿತ ಭವಿಷ್ಯವಿದೆ. ಈಗಿನ ಜನರಿಗೆ ಅದರ ಸ್ಪಷ್ಟ ಅರಿವು ಮೂಡುತ್ತಿದೆ. ಹೀಗಾಗಿ ಪ್ರಜಾಪ್ರಭುತ್ವಕ್ಕೆ ಸಾವಿಲ್ಲವೆಂದೇ ನಾನು ನಂಬುತ್ತೇನೆ.

## ಸುನಂದಾ ಕಡಮೆ

ಮನುಷ್ಯ ವ್ಯಾಪಾರವನ್ನು ಸೂಕ್ಷ್ಮವಾಗಿ, ಚಿತ್ರವತ್ತಾಗಿ ರೇಖಿಸುವ ಕಲೆಗಾರ್ತಿ ಸುನಂದಾ ಪ್ರಸ್ತುತ ಹುಬ್ಬಳ್ಳಿಯಲ್ಲಿ ನೆಲಸಿದ್ದಾರೆ. 'ಪುಟ್ಟಪಾದದ ಹೆಜ್ಜೆ ಗುರುತು', 'ಗಾಂಧಿ ಚಿತ್ರದ ನೋಟು', 'ಕಂಬಗಳ ಮರೆಯಲ್ಲಿ', 'ತುದಿ ಮಡಚಿಟ್ಟ ಪುಟ' ಅವರ ಕಥಾಸಂಗ್ರಹಗಳು, 'ಬರೀ ಎರಡು ರೆಕ್ಕೆ', 'ದೋಣಿ ನಡೆಸುವ ಹುಟ್ಟು' ಕಾದಂಬರಿಗಳು, ಕವಿತೆ, ಅಂಕಣ ಬರಹಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.